ದಿನಾಂಕಃ19.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ ಟಿ.ಬಿ.ಎಂ. ವಕೀಲರಿಂದ ಪ್ರತಿವಾದಿ ಪರ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಅಗಸರ ದಾನಪ್ಪ ದಾವ ಸ್ವತ್ತಿನಲ್ಲಿ ಅನಧಿಕೃತವಾಗಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ 1975-76 ಮತ್ತು 1981-82 ರ ಅಸೆಸ್ಮೆಂಟ್ ರಿಜಿಸ್ಟರ್ ನ್ನು ಗುರುತಿಸಿದ್ದು, ಅದನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ಅದರಲ್ಲಿ ದಾವ ಸ್ವತ್ತು ಖಾಲಿ ನಿವೇಶನ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆ ಯಲ್ಲಿ ಅ ಸ್ವತ್ತು ಯಾರಿಗೆ ಸೇರಿರುತ್ತದೆ ಮತ್ತು ಮಾಲಿಕತ್ವ ಪರಿಶೀಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯಲ್ಲಿ ಅಳತೆ ತಪ್ಪಿರುತ್ತದೆ ಎನ್ನುವರು. 1986-87 ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಅದರಲ್ಲಿ ಯಾರಿಂದ ಕಂದಾಯ ವಸೂಲಿ ಮಾಡಬೇಕೆಂದು ಷರಾ ಬರೆದು ಪುರಸಭೇ ರವರು ತೀರ್ಮಾನ ಮಾಡಬೇಕೆಂದು ತಿಳಿಸಲಾಗಿದೆ ಎಂದರೆ ಸರಿ.

1993-94 ರ ಅಸೆಸ್ಮೆಂಟ್ ರಿಜಿಸ್ಟರ್ ನ್ನು ಗುರುತಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. 2001-2002 ರ ಅಸೆಸ್ಮೆಂಟ್ ರಿಜಿಸ್ಟರ್ ದಾಖಲೆಯಲ್ಲಿ ನನ್ನ ತಂದೆ ಹೆಸರು ನಮೂದಾಗಿರುತ್ತದೆ ಎಂದರೆ ಸರಿ, ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ಅದನ್ನು ಪುರಸಭೆ ನಿವೇಶನ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಹಿಂದಿನ ದಾಖಲೆಗಳನ್ನು ನೋಡಿಕೊಂಡು ಅದು ಪುರಸಭೆ ನಿವೇಶನ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಾಗಿರುತ್ತದೆ ಎನ್ನುವರು. ನನ್ನ ತಂದೆ ಹೆಸರಿಗೆ ಖಾತೆ ವರ್ಗಾವಣೆಯಾದ ಸಮಯದಲ್ಲಿ ಯಾವುದೇ ಮ್ಯೂಟೇಶನ್ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಪರಮೇಶ್ವರವರಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಅಗಸರ ದಾನಪ್ಪ ರವರಿಂದ ಪರಮೇಶ್ವರವರಿಗೆ ಖಾತೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿ.

1999 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ನಗರಸಭೆ ರವರ ಮೇಲೆ ಪ್ರಭಾವ ಬೀರಿ ನನ್ನ ತಂದೆ ಹೆಸರನ್ನು ನಿಡಿ-5 ರಲ್ಲಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿಸಬೇಕಾಗಿದ್ದರೆ ನನ್ನ ತಂದೆ ಹೆಸರು ಕೆರಿಯಪ್ಪ ಎಂದು ನಮೂದು ಮಾಡಿಸುತ್ತಿದೆ ಎನ್ನುವರು. ಸದರಿ ದಾಖಲೆಯಲ್ಲಿ ಯಾರು ತಪ್ಪಾಗಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಭೊಜಪ್ಪ ರವರು ಮಾಡಿಸಿರುತ್ತಾರೆ ಎನ್ನುವರು.

5 ನೇ ಪ್ರತಿವಾದಿಗೆ ಇ-ಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿ ಇತ್ತೀಚೆಗೆ ಮಾಡಿಸಿರುತ್ತಾರೆ ಎನ್ನುವರು. ಅವರ ಇ-ಸ್ವತ್ತು ನಲ್ಲಿ ಪೂರ್ವಕ್ಕೆ ಕರಿಯಪ್ಪನ ನಿವೇಶನಕ್ಕೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು.

ದಾವ ಸ್ವತ್ತಿನ ಪೂರ್ವ ಪಶ್ಚಿಮದ ಕಡೆ ನಗರಸಭೆ ರಸ್ತೆ ಎಂದು ನಮೂದು ಮಾಡಿಸಿದ್ದೇನೆ. ನಿಪಿ-8 ಕ್ರಯ ಪತ್ರದ ಆಧಾರದ ಮೇಲೆ ಚೆಕ್ಕುಬಂದಿ ನಮೂದು ಮಾಡಿಸಿರುತ್ತೇನೆ. ನಿಪಿ-8 ರ ಪಶ್ಚಿಮಕ್ಕೆ ಅಖ್ತೈರು ತಲೆಬೇಲಿ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಪೂರ್ವದಿಂದ ಪಶ್ಚಿಮದ ಗಡಿವರೆಗೂ 205 ಅಡಿ ಇರುತ್ತದೆ ಎಂದರೆ ಗೊತ್ತಿಲ್ಲ. ನನ್ನ ಕ್ರಯಪತ್ರದಲ್ಲಿ ಪಶ್ಚಿಮದ ಕಡೆಗೆ ರಸ್ತೆ ಎಂದು ನಮೂದು ಆದ ಕಾರಣ ನಾನು ರಸ್ತೆ ಎಂದು ವಾದ ಮಾಡುತ್ತಿದ್ದೇನೆ ಎಂದರೆ ಸರಿ. ನಿಪಿ-9 ರ ಸಮಯದಲ್ಲೂ ಸಹ ಪಶ್ಚಿಮದ ಕಡೆ ಹಿತ್ತಲ ತಲೆಬೇಲಿ ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

ದಾವ ಸ್ವತ್ತಿನಲ್ಲಿ ಈಗ ಒಂದು ಕಟ್ಟಡ ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಭಾವಚಿತ್ರ ಗುರುತಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅವರು ಅಕ್ರಮವಾಗಿ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಕಟ್ಟಿರುತ್ತಾರೆ ಎನ್ನುವರು. ಸದಗಿ ಕಟ್ಟಡದ ಉತ್ತರದ ಬಿಳಿ ಗೊಡೆ ಕಂಡು ಬರುವ ಕಟ್ಟಡ ನನ್ನೆಸಾಬ್ ರವರಿಗೆ ಸೇರಿರುತ್ತದೆ ಎಂದರೆ ಇರಬಹುದು. ಸದರಿ ಮನೆಯ ಮುಂಭಾಗ ಪಶ್ಚಿಮಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಕಟ್ಟಡದ ಹಿಂದೆ ಪೂರ್ವಕ್ಕೆ ಒಂದು ಬೇಲಿ ಇದ್ದು ಅದರ ನಂತರ ನನ್ನ ನಿವೇಶನ ಬರುತ್ತದೆ ಎಂದರೆ ಸರಿಯಲ್ಲ. ನನ್ನ ದಾಖಲೆಗಳ ಪ್ರಕಾರ ಪೂರ್ವ ಪಶ್ಚಿಮಕ್ಜೆ 150 ಇರುತ್ತದೆ, ಅದರಲ್ಲಿ 5-10 ಅಡಿ ಹೆಚ್ಚು ಕಡಿಮೆ ಆಗಬಹುದು ಎನ್ನುವರು.

ನನ್ನ ಅಗಸರ ದಾನಪ್ಪ ಮತ್ತು ಪರಮೇಶ್ವರಪ್ಪ ರವರ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆಗಳು ಇಲ್ಲದೇ ಇದ್ದರೂ ನಾನು ನಗರಸಭೆ ರವರ ಮೇಲೆ ಪ್ರಭಾವ ಬೀರಿ ನನ್ನ ತಂದೆ ಹೆಸರಿಗೆ ಖಾತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಗೆ ಪದೇ ಪದೆ ವಕೀಲರಿಗೆ ಪ್ರಶ್ನೆ ಮಾಡಲು ಅನುವು ಮಾಡಿಕೊಡಬೇಕು ಮತ್ತು ಅವರೊಂದಿಗೆ ವಾದ ಮಾಡಬಾರದೆಂದು ತಿಳುವಳಿಕೆ ಹೇಳಿದರೂ ಸಹ ಆತ ವಕೀಲರಿಗೆ ಪ್ರಶ್ನೆ ಮಾಡಲು ಅಡ್ಡಿ ಉಂಟು ಮಾಡಿ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿರುತ್ತಾರೆ.)

ಸರಕಾರದಿಂದ ದಾನಪ್ಪ ರವರಿಗೆ ದಾವ ಸ್ವತ್ತು ನೀಡಿರುವ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಗೊತ್ತಿಲ್ಲ ಎನ್ನುವರು. ಸದರಿ ದಾನಪ್ಪ ರವರಿಗೆ ದಾಖಲೆ ಇತ್ತು ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳಾಗಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ 5 ನೇ ಪ್ರತಿವಾದಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಅದು ನನ್ನ ಸ್ವತ್ತು ಎಂದು ಹೇಳಿ ವಿನಃಕಾರಣ ತೊಂದರೆ ಮಾಡಿ ಕೆಲಸ ನಿಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ವತ್ತು ಎಂದು ಹೇಳುವ ನಿವೇಶನ ಮತ್ತು ದಕ್ಷಿಣ ಕಡೆ ಇರುವ ರಾಮಚಂದ್ರ ರವರ ಸ್ವತ್ತಿನ ನಡುವೆ ಬೇಲಿ ಇರುತ್ತದೆ ಎಂದರೆ ಸಾಕ್ಷಿ ಅವರು ಒತ್ತುವರಿ ಮಾಡಿ ಬೇಲಿ ಹಾಕಿರುತ್ತಾರೆ ಎನ್ನುವರು. ಎಷ್ಟು ಅಡಿ ಒತ್ತುವರಿ ಆಗಿರುತ್ತದೆ ಎಂದು ಗೊತ್ತಿಲ್ಲ. ಅಗಸರ ದಾನಪ್ಪ ರವರ ದಾವ ನಿವೇಶನ ಪೂರ್ವ ಪಶ್ಚಿಮ 15 ಅಡಿ ಮಾತ್ರ ಇತ್ತು ಎಂದರೆ ಸರಿಯಲ್ಲ.

ನಾನು ಪುರಸಭೇ ರವರ ಮೇಲೆ ಪ್ರಭಾವ ಬೀರಿ ದಾಖಲೆಗಳಲ್ಲಿ ವಿಸ್ತೀರ್ಣ ತಿದ್ದುಪಡಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಅಗಸರ ದಾನಪ್ಪ ರವರಿಂದ ಬಗರ್ಹುಕಂ ಖಾತೆ ವರ್ಗಾವಣೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕಟ್ಟಡವನ್ನು ದಾವ ಸ್ವತ್ತಿನಲ್ಲಿ ಕಟ್ಟಿಲ್ಲ ಎಂದರೆ ಸರಿ. 1962 ರಿಂದ ದಾವ ಸ್ವತ್ತು ಖಾಲಿ ನಿವೇಶನ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ಒಂದು ಗುಡಿಸಲು ಇತ್ತು ಎನ್ನುವರು. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಶ್ರೀ ಎಂ.ಆರ್. ವಕೀಲರಿಂದ 1 ನೇ ಪ್ರತಿವಾದಿ ಪರ**

ದಾವ ಸ್ವತ್ತನ್ನು ನನ್ನ ತದೆ ಪರಮೇಶ್ವರಪ್ಪರಿಂದ ಖರೀದಿ ಮಾಡಿರುತ್ತಾರೆ, ಸದರಿ ಪರಮೇಶ್ವರಪ್ಪ ರವರು ಅಗಸರ ದಾನಪ್ಪ ರವರಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಅಗಸರ ದಾನಪ್ಪ ರವರಿಗೆ ನಗರಸಭೆ ರವರು ಯಾವುದೇ ಮಾಲಿಕತ್ವ ದಾಖಲೆ ಬರೆದುಕೊಡದ ಕಾರಣ ಅತ ಮಾಲೀಕರಾಗಿರುವುದಿಲ್ಲ ಅತನಿಂದ ಪರಮೇಶ್ವರಪ್ಪ ಮತ್ತು ನಾವು ಖರೀದಿ ಮಾಡಿದರೂ ಸಹ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವ ಎ ಶೆಡ್ಯೂಲ್ ಸ್ವತ್ತನ್ನು ನಗರಸಭೆ ರವರು ತಿದ್ದುಪಡಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಬಿ ಮತ್ತು ಸಿ ಶೆಡ್ಯೂಲ್ ಸ್ವತ್ತನ್ನು ದಿಃ15.09.1989 ಮತ್ತು 21.04.2001 ರಂದು ಕಾನೂನು ಪ್ರಕಾರ ಅದನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆ ಯಲ್ಲಿ ಯಾವುದೇ ಪರಿಹಾರ ಪಡೆಯಲು ಯೋಗ್ಯನಲ್ಲ ಎಂದರೆ ಸರಿಯಲ್ಲ.

**6 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ